# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1068 |
| ಉತ್ತರಿಸಬೇಕಾದ ದಿನಾಂಕ | 25.08.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಗದಗ ಬೆಟಗೇರಿ ನಗರದಲ್ಲಿ ಕೇಂದ್ರ ಸರ್ಕಾರದ ಸರ್ವರಿಗೂ ಸೂರು ಯೋಜನೆಯಡಿ ಎಷ್ಟು ಮನೆಗಳ ನಿರ್ಮಾಣ ಮಾಡಲಾಗುತ್ತಿದೆ ಹಾಗೂ ಯಾವ ದಿನಾಂಕದಂದು ಕಾಮಗಾರಿ ಪ್ರಾರಂಭವಾಗಿದೆ ಮತ್ತು ಈ ಯೋಜನೆ ಪೂರ್ಣಗೊಳಿಸಲು ನಿಗದಿಯಾದ ಅವಧಿ ಎಷ್ಟು; (ವಿವರವಾದ ಮಾಹಿತಿ ನೀಡುವುದು)</td><td>
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:<br><br>
ಗದಗ ಬೆಟಗೇರಿ ನಗರದಲ್ಲಿ ಕೇಂದ್ರ ಸರ್ಕಾರದ ಸರ್ವರಿಗೂ ಸೂರು ಯೋಜನೆಯಡಿ ಮಂಡಳಿಯಿಂದ ಒಟ್ಟು 863 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಸದರಿ ಕಾಮಗಾರಿಯನ್ನು ದಿನಾಂಕ:19.05.2022ರಂದು ಪ್ರಾರಂಭಿಸಿದ್ದು, ಯೋಜನೆಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶ ನಿಗದಿಪಡಿಸಲಾಗಿದೆ.<br><br>
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:<br><br>
ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ದ AHP ಅಡಿ ಗದಗ ಬೆಟಗೇರಿ ನಗರದ ಗಂಗಿಮಡಿ ಪ್ರದೇಶದಲ್ಲಿ 3630 ಮನೆಗಳನ್ನು ಮತ್ತು ಲಿಡ್ಕರ್ ಬಡಾವಣೆಯಲ್ಲಿ 229 ಮನೆಗಳನ್ನು ಒಟ್ಟು 3859 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.<br><br>
ಗದಗ ಬೆಟಗೇರಿ ನಗರ ಸಭೆಯು 3630 ಮನೆಗಳ ನಿರ್ಮಾಣ ದಿನಾಂಕ: 27.03.2018 ರಂದು ಹಾಗೂ 229 ಮನೆಗಳ ನಿರ್ಮಾಣಕ್ಕಾಗಿ ದಿನಾಂಕ:05.01.2018 ರಂದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ ಕಾಮಗಾರಿಯನ್ನು ಪ್ರಾರಂಭಿಸಿದೆ.<br><br>
ಕರಾರು ಒಪ್ಪಂದದಂತೆ ಈ ಯೋಜನೆಯನ್ನು 24 ತಿಂಗಳುಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. ಈ ಪೈಕಿ ಲಿಡ್ಕರ್ ಬಡಾವಣೆಯಲ್ಲಿ 229 ಮನೆಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿದೆ.<br><br>
ಪ್ರಸ್ತುತ ಕಾಮಗಾರಿಯ ಭೌತಿಕ ಪ್ರಗತಿ ಈ ಕೆಳಗಿನಂತಿದೆ.<br><br>
<table>
<tr><th>ಯೋಜನೆ</th><th>ತಳಪಾಯ</th><th>ಗೋಡೆ</th><th>ಛಾವಣಿ</th><th>ಪೂರ್ಣ /ಹಂಚಿಕೆಯಾದ ಮನೆಗಳು</th></tr>
<tr><td>ಗದಗ- 3630</td><td>694</td><td>1896</td><td>792</td><td>248</td></tr>
<tr><td>ಗದಗ - 229</td><td>0</td><td>0</td><td>-</td><td>229</td></tr>
<tr><td>ಒಟ್ಟು = 3859</td><td>694</td><td>1896</td><td>792</td><td>477</td></tr>
</table>
<br>
ಫಲಾನುಭವಿಗಳ ಪಾಲಿನ ವಂತಿಕೆ ಮೊತ್ತವನ್ನು ಫಲಾನುಭವಿಗಳು ಪಾವತಿಸಲು ಆಸಕ್ತಿ ತೋರದೆ ಇರುವುದರಿಂದ ಸದರಿ ಕಾಮಗಾರಿಯು ವಿಳಂಬವಾಗಿರುತ್ತದೆ.
</td></tr>
<tr><td>ಆ)</td><td>ಈ ಯೋಜನೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಣಕಾಸಿನ ಪಾಲು ಎಷ್ಟು; ಮತ್ತು ಅದಕ್ಕಾಗಿ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ ಎಷ್ಟು; (ವಿವರವಾದ ಮಾಹಿತಿ ನೀಡುವುದು)</td><td>
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:<br>
ರೂ.ಲಕ್ಷಗಳಲ್ಲಿ
<table>
<tr><th>ಮಂಜೂರಾದ ಮನೆಗಳ ಸಂಖ್ಯೆ</th><th>ಪ್ರಾರಂಭಿಸಿರುವ ಮನೆಗಳ ಸಂಖ್ಯೆ</th><th>ಯೋಜನಾ ಮೊತ್ತ (GST ಒಳಗೊಂಡಂತೆ)</th><th>ಕೇಂದ್ರ ಸರ್ಕಾರದ ಪಾಲು Rs.1.50 lakhs ಪ್ರತಿ ಮನೆಗೆ</th><th>ರಾಜ್ಯದ ಸರ್ಕಾರದ ಪಾಲು (Rs.2.00 lakhs for SC/ST & for Others Rs.1.20 Lakhs) ಪ್ರತಿ ಮನೆಗೆ</th><th>ಫಲಾನುಭವಿ ವಂತಿಕೆ ಪಾಲು</th><th>ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ</th></tr>
<tr><td>863</td><td>863</td><td>5243.39</td><td>1294.50</td><td>1298.80</td><td>2650.09</td><td>3885.60</td></tr>
</table>
</td></tr>
</table>

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**

ಈ ಯೋಜನೆಗಳಡಿ ಅನುಮೋದಿತ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲಿನ ಮೊತ್ತ ಹಾಗೂ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಮೊತ್ತದ ವಿವರಗಳು ಈ ಕೆಳಕಂಡಂತೆ ಇವೆ

(ರೂ. ಕೋಟಿಗಳಲ್ಲಿ)

| ಮನೆಗಳು | ಅನುಮೋದಿತ ಮೊತ್ತ | | | ಬಿಡುಗಡೆಯಾದ ಮೊತ್ತ | | | ಬಿಡುಗಡೆಗೆ ಬಾಕಿ ಮೊತ್ತ | | |
|---|---|---|---|---|---|---|---|---|---|
| | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು |
| 3630 | 54.45 | 49.43 | 103.88 | 43.56 | 39.54 | 83.1 | 10.89 | 9.89 | 20.78 |
| 229 | 3.43 | 4.64 | 8.07 | 3.43 | 4.12 | 7.55 | 0 | 0.52 | 0.52 |
| **ಒಟ್ಟು** | **57.88** | **54.07** | **111.95** | **46.99** | **43.66** | **90.65** | **10.89** | **10.41** | **21.3** |

*3630 ಮನೆಗಳ ಯೋಜನೆಗೆ ರಾಜ್ಯ ಸರ್ಕಾರದಿಂದ ಎಸ್.ಸಿ.ಪಿ/ ಟಿ.ಎಸ್.ಪಿ ಯೋಜನೆಯಡಿ ರೂ. 9.78 ಕೋಟಿಗಳನ್ನು ಒದಗಿಸಲಾಗಿದೆ. ಫಲಾನುಭವಿಗಳಿಂದ ರೂ. 45.85 ಲಕ್ಷ ಸಂಗ್ರಹಿಸಲಾಗಿದೆ.

** 229 ಮನೆಗಳ ಯೋಜನೆಗೆ ಲಿಡ್ಕರ್ ನಿಗಮದಿಂದ 2.83 ಕೋಟಿ ಮೊತ್ತವು ಬಿಡುಗಡೆಯಾಗಿದೆ

3630 ಮನೆಗಳ ನಿರ್ಮಾಣದ ಯೋಜನೆಯಡಿ ಗುತ್ತಿಗೆದಾರರಿಗೆ ರೂ. 93.33 ಕೋಟಿಗಳ (ರೂ. 83.10+9.78+0.45 ಕೋಟಿ) ಮೊತ್ತವನ್ನು ಹಾಗೂ 229 ಮನೆಗಳ ನಿರ್ಮಾಣದ ಯೋಜನೆಗೆ ರೂ.10.39 ಕೋಟಿಗಳ (ರೂ.7.55+2.83 ಕೋಟಿ) ಮೊತ್ತವನ್ನು ಪಾವತಿಸಲಾಗಿದೆ.

ಇ) ಈ ಯೋಜನೆಯಡಿ ಲಾಭ ಪಡೆಯಲು ಎಷ್ಟು ಜನರು ಅರ್ಜಿ ಸಲ್ಲಿಸಿದ್ದಾರೆ ಮತ್ತು ಎಷ್ಟು ಜನರಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ; (ಮಾಹಿತಿ ನೀಡುವುದು)

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:**

ಗದಗ ಬೆಟಗೇರಿ ನಗರ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ವಸತಿ ಕಲ್ಪಿಸಲು ಕೈಗೊಂಡ ಸಮೀಕ್ಷೆಯ ವಿವರಗಳು ಈ ಕೆಳಕಂಡಂತಿವೆ.

| ತಾಲ್ಲೂಕಿನ ಹೆಸರು | ಕೊಳಚೆ ಪ್ರದೇಶಗಳ ಸಂಖ್ಯೆ | ಬೇಡಿಕೆ ಸಮೀಕ್ಷೆ ಕೈಗೊಂಡಿರುವ ಮನೆಗಳ ಸಂಖ್ಯೆ | ಪಿ.ಎಂ.ಎ ಯೋಜನೆಯಡಿ ಕೈಗೆತ್ತಿಕೊಂಡಿರುವ ಮನೆಗಳ ಸಂಖ್ಯೆ | ಪೂರ್ಣಗೊಂಡು ಫಲಾನುಭವಿಗಳ ವಶಕ್ಕೆ ನೀಡಲಾಗಿರುವ ಮನೆಗಳ ಸಂಖ್ಯೆ | ಹೆಚ್ಚುವರಿ ಮನೆ ನಿರ್ಮಾಣಕ್ಕಾಗಿ ಬೇಡಿಕೆ ಇರುವ ಸಂಖ್ಯೆ |
|---|---|---|---|---|---|
| ಗದಗ ಬೆಟಗೇರಿ | 45 | 5026 | 863 | 517 | 4163 |

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**

ಸದರಿ ಯೋಜನೆಯಡಿ ವಸತಿ ಸೌಲಭ್ಯ ಪಡೆಯಲುಒಟ್ಟು 8327 ವಸತಿ ರಹಿತ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ.

3630 (G+1) ಮನೆಗಳ ಯೋಜನೆಯಡಿ 248 ಮನೆಗಳನ್ನು ಹಾಗೂ 229 (GF) ಮನೆಗಳ ಯೋಜನೆಯಡಿ 229 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

ಈ) ಮನೆ ಹಂಚಿಕೆ ಮಾಡುವ ವಿಧಾನವೇನು; ಈ ಕುರಿತು ಮನೆ ಹಂಚಿಕೆ ಆಗಿದ್ದಲ್ಲಿ ಯಾವ ವಿಧಾನದ ಅಡಿ ಯಾರು ಹಂಚಿಕೆ ಮಾಡಿದ್ದಾರೆ? (ಸಂಪೂರ್ಣ ದಾಖಲೆ ಒದಗಿಸುವುದು)

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:**

ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಸತಿ ಯೋಜನೆಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಸರ್ಕಾರ ಸುತ್ತೋಲೆ ಸಂಖ್ಯೆ:ನಅಇ 177 ಸಿಎಸ್ಎಸ್ 2016, ದಿನಾಂಕ:17.06.2016ರಯನ್ವಯ ಕೊಳಗೇರಿ ಪ್ರದೇಶಗಳಲ್ಲಿನ ಮನೆ ಸಮೀಕ್ಷೆ ಮಾಡಿ ಬೇಡಿಕೆಗೆ ಅನುಗುಣವಾಗಿ ಸರ್ಕಾರವು ಗುರಿ ನಿಗದಿಪಡಿಸಿದ್ದಲ್ಲಿ ಯೋಜನಾ ವರದಿ ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅನುಮೋದಿತ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗುವುದು.

ಅದರಂತೆ ಹಾಲಿ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೊಳಗೇರಿ ನಿವಾಸಿಗಳ ಕಚ್ಚಾ/ಸಮಿ ಪಕ್ಕ ಮನೆಗಳನ್ನು ತೆರವುಗೊಳಿಸಿ ಅದೇ ಜಾಗದಲ್ಲಿ ಮನೆಗಳ ನಿರ್ಮಾಣ ಮಾಡಿ ಫಲಾನುಭವಿಗಳ ವಶಕ್ಕೆ ನೀಡಲಾಗುವುದು.

ಮುಂದುವರೆದಂತೆ, ಕೆರೆಯಂಗಳ, ರೈಲ್ವೆಹಳಿ ಪಕ್ಕ, ಹೈಟೆನ್ಷನ್, ರಾಜಕಾಲುವೆ ಮುಂತಾದ ವಾಸಕ್ಕೆ ಯೋಗ್ಯವಲ್ಲದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೊಳಗೇರಿ ನಿವಾಸಿಗಳನ್ನು ಮಂಡಳಿಯ ಕಾಯ್ದೆ 11 ರಡಿ ಘೋಷಿಸಿ, ಸದರಿ ನಿವಾಸಿಗಳಿಗೆ

| | | |
|---|---|---|
| | | ಪುನರ್ ವಸತಿ ಕಲ್ಪಿಸುವ ಸಲುವಾಗಿ ಆಯಾ ಜಿಲ್ಲಾಧಿಕಾರಿಗಳಿಂದ / ಸ್ಥಳೀಯ ಸಂಸ್ಥೆಗಳಿಂದ ಮಂಡಳಿ ಮುಫತ್ತಾಗಿ ಜಮೀನು ಪಡೆದು ಚಾಲ್ತಿಯಲ್ಲಿರುವ ವಸತಿ ಯೋಜನೆಡಿ ಮನೆಗಳನ್ನು ನಿರ್ಮಿಸಿ, ನಿವಾಸಿಗಳನ್ನು ಸ್ಥಳಾಂತರಿಸಿ, Re-Location ಮಾದರಿಯಲ್ಲಿ ಪುನರ್ ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ Re-Location ಮಾದರಿ ಮನೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ವಇ 115 ಕೊಮಂಇ 2013(2), ದಿನಾಂಕ:04.02.2014ರಲ್ಲಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಅದರನ್ವಯ ಹಂಚಿಕೆ ಮಾಡಲಾಗುವುದು.<br><br>**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**<br><br>ರಾಜ್ಯದಲ್ಲಿ PMAY(U) ಅಭಿಯಾನವನ್ನು ರಾಜ್ಯ ಪುರಸ್ಕೃತ ವಸತಿ ಯೋಜನೆಗಳ ಸಮನ್ವಯತೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.<br><br>PMAY(U) ಅಭಿಯಾನದ ಮಾರ್ಗಸೂಚಿಯನ್ವಯ ನಗರಸಭೆಯವರು ಸರ್ವೇ ಕಾರ್ಯ ಕೈಗೊಂಡು ಗದಗ-ಬೆಟಗೇರಿ ಅವಳಿ ನಗರದಲ್ಲಿ 8327 ವಸತಿ ರಹಿತ ಕುಟುಂಬಗಳನ್ನು ಗುರುತಿಸಿರುತ್ತಾರೆ.<br><br>ಅದರಂತೆ ನಗರಸಭೆಯವರು ಅನುಮೋದನೆಗೊಂಡ ಮನೆಗಳ ಸಂಖ್ಯೆಗೆ ಎದುರಾಗಿ ಅರ್ಹ ಕುಟುಂಬಗಳಿಂದ ಸ್ವೀಕೃತಗೊಂಡಿರುವ ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಕುಟುಂಬಗಳ ಪಟ್ಟಿಯನ್ನು ಸಿದ್ಧಪಡಿಸಿರುತ್ತಾರೆ. ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಜರುಗಿದ ನಗರ ಆಶ್ರಯ ಸಮಿತಿಯು ಅಂತಿಮವಾಗಿ 3630 (ಜಿ+1) ಫಲಾನುಭವಿಗಳನ್ನು ಆಯ್ಕೆ ಮಾಡಿದೆ. |

ಸಂಖ್ಯೆ: ವಇ 170 ಹೆಚ್‌ಎಫ್‌ಎ 2026]

(ಬಿ.ಜೆಡ್ ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು.